2019–20

ಮಾಹಿತಿ ಹಕ್ಕು ಅಧಿನಿಯಮ, 2005
ಕಲಂ 4(1)(ಬಿ) ರ ಅಡಿಯಲ್ಲಿ

ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 4(1)(ಬಿ) ರನ್ವಯ ಆನೇಕಲ್ ಯೋಜನಾ ಪ್ರಾಧಿಕಾರದ ಕಾರ್ಯಗಳು ಈ ಕೆಳಕಂಡಂತಿದೆ.

1. ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನ ಕಾಯ್ದೆ 1961 ರನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅಭಿವೃದ್ಧಿಗಳ ನಿಯಂತ್ರಣ, ಭೌತಿಕ ಸರ್ವೆ ನಡೆಸುವುದು, ಮಹಾಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಸ್ಥಳೀಯ ಯೋಜನಾ ಪ್ರದೇಶದಲ್ಲಿ ಮಹಾಯೋಜನೆಯನ್ನು ಜಾರಿ ಮಾಡುವುದು.

2. ತಾಂತ್ರಿಕ ಅಭಿಪ್ರಾಯವನ್ನು ನೀಡುವುದು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರನ್ವಯ ಸಂಬಂಧಪಟ್ಟ ವಿವಿಧ ಇಲಾಖೆ / ಸಂಸ್ಥೆಗಳಿಗೆ ಸಹಕಾರ ನೀಡುವುದು.

3. ವ್ಯವಸಾಯ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯವನ್ನು ನೀಡುವುದು.

4. ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಪ್ರಾರಂಭಿಕ ಪ್ರಮಾಣ ಮತ್ತು ತಾಂತ್ರಿಕ ಅಭಿಪ್ರಾಯ ನೀಡುವುದು ಹಾಗೂ ವ್ಯಾಪ್ತಿಯಲ್ಲಿ ಬರುವ ಭೂ ಪರಿವರ್ತನೆಯಾದ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕೆ ಹಾಗೂ ಇತರೆ ವಿನ್ಯಾಸ ನಕ್ಷೆಗಳನ್ನು ತಯಾರಿಸಿ ಅನುಮೋದನೆ ನೀಡುವುದು.

ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳ ಕರ್ತವ್ಯಗಳು

1. **ಅಧ್ಯಕ್ಷರು**

ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು, 1965 ರಂತೆ ಆನೇಕಲ್ ಸ್ಥಳೀಯ ಯೋಜನಾ ಪ್ರಾಧಿಕಾರದ ಸಭೆಯನ್ನು ನಡೆಸುವುದು ಹಾಗೂ ಕಾಲಕಾಲಕ್ಕೆ ರಚಿಸಲಾಗುವ ಎಲ್ಲಾ ಸಮಿತಿಗಳಿಗೆ ಇವರು ಅಧ್ಯಕ್ಷರಾಗಿರುತ್ತಾರೆ.

2. **ಸದಸ್ಯರು**

ಪ್ರಾಧಿಕಾರದ ಸಭೆಗಳಲ್ಲಿ ಭಾಗವಹಿಸುವುದು ಮತ್ತು ಸಭೆಯ ವಿಷಯಗಳನ್ನು ಚರ್ಚಿಸುವುದು.

3. **ಸದಸ್ಯ–ಕಾರ್ಯದರ್ಶಿಗಳು**

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ.

1. ಯೋಜನಾ ಪ್ರಾಧಿಕಾರದ ಕಛೇರಿಯ ಸಮಗ್ರ ಕಾರ್ಯ ನಿರ್ವಹಣೆ ಮತ್ತು ಮೇಲ್ವಿಚಾರಣೆಗಳನ್ನೊಳಗೊಂಡಂತೆ ಯೋಜನಾ ಪ್ರಾಧಿಕಾರದ ಸಭೆಯ ನಿರ್ಣಯಗಳನ್ನು ಜಾರಿಗೊಳಿಸುವ ಕರ್ತವ್ಯದೊಂದಿಗೆ ಈ ಕೆಳಕಂಡ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಈ ಕಾಯ್ದೆಯಡಿಯಲ್ಲಿ ಅಧ್ಯಕ್ಷರ ಅಧಿಕಾರಗಳ ಬಗ್ಗೆ ಯಾವುದೇ ಪೂರ್ವಾಗ್ರಹವಿಲ್ಲದೆ ಯೋಜನಾ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿಗಳು ಈ ಕೆಳಕಂಡ ಅಧಿಕಾರವನ್ನು ಹೊಂದಿರುತ್ತಾರೆ.

(ಅ) ಯೋಜನಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ತಾಂತ್ರಿಕ ಅಧಿಕಾರಿಗಳ ಕರ್ತವ್ಯಗಳು.

(ಆ) ಯೋಜನಾ ಪ್ರಾಧಿಕಾರದ ಎಲ್ಲಾ ಆಯ–ವ್ಯಯ ಯೋಜನೆ ಜಾರಿ ಹಾಗೂ ಮೇಲ್ವಿಚಾರಣಾ ಕಾರ್ಯಗಳು.

(ಇ) ಯೋಜನಾ ಪ್ರಾಧಿಕಾರದ ಆಡಳಿತ ಮತ್ತು ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸುವುದರ ಜೊತೆಗೆ ಪ್ರಾಧಿಕಾರಕ್ಕೆ ಅಗತ್ಯ ಬಿದ್ದಾಗ ಇತರೆ ವಿಷಯಗಳ ಮಾಹಿತಿಯನ್ನು ಸಲ್ಲಿಸುವುದು.

(ಈ) ಪ್ರತಿ ಸಾಲಿನ ಆರ್ಥಿಕ ವರ್ಷ ಮುಗಿದ ಮೂರು ತಿಂಗಳೊಳಗಾಗಿ ಯೋಜನಾ ಪ್ರಾಧಿಕಾರದ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು ಹಾಗೂ ಪರಿಶೋದನೆ ಲೆಕ್ಕಪತ್ರಗಳನ್ನು ತಯಾರಿಸುವುದು ಹಾಗೂ ಅನುಮೋದನೆಗಾಗಿ ಸಲ್ಲಿಸುವುದು ಹಾಗೂ ತದನಂತರ ಅವುಗಳ ಪ್ರತಿಗಳನ್ನು ಮಂಡಳಿ ನಿರ್ದೇಶಕರು ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು.

4. <u>ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು</u>

ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಪ್ರಾಧಿಕಾರದ ಕರ್ತವ್ಯಗಳ ಉಸ್ತುವಾರಿಯನ್ನು ನೋಡಿಕೊಳ್ಳವುದು ಹಾಗೂ ನಗರ ಯೋಜನೆ, ಆಡಳಿತ ಮತ್ತು ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ಕೆಲಸಗಳಲ್ಲಿ ಸದಸ್ಯ–ಕಾರ್ಯದರ್ಶಿಗಳ ಜೊತೆಗೆ ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವುದು.

5. <u>ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು</u>

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಪ್ರಾಧಿಕಾರದ ಕರ್ತವ್ಯಗಳ ಉಸ್ತುವಾರಿಯನ್ನು ನೋಡಿಕೊಳ್ಳವುದು ಹಾಗೂ ನಗರ ಯೋಜನೆ, ಆಡಳಿತ ಮತ್ತು ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ಕೆಲಸಗಳ ಸದಸ್ಯ–ಕಾರ್ಯದರ್ಶಿಗಳ ಜೊತೆಗೆ ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವುದು.

6. <u>ನಗರ ಯೋಜಕರು</u>

ನಗರ ಯೋಜಕರು ದೈನಂದಿನ ತಾಂತ್ರಿಕ ವಿಷಯಗಳನ್ನು ಪರಿಶೀಲಿಸಿ ಅನುಮೋದನೆಗಾಗಿ ಮೇಲಾಧಿಕಾರಿಗೆ ಸಲ್ಲಿಸುವುದು.

7. <u>ಗ್ರೂಪ್– ಡಿ ನೌಕರರು</u>

ಅಧಿಕಾರಿಗಳ ಸೂಚನೆಯಂತೆ ಗ್ರೂಪ್–ಡಿ ನೌಕರರು ಪ್ರಾಧಿಕಾರದ ವಿಭಾಗಗಳ ನಡುವೆ ಕಡತಗಳನ್ನು ಒಯ್ಯುವುದು ಹಾಗೂ ಅವರಣವನ್ನು ಸ್ವಚ್ಚವಾಗಿರಿಸುವುದು.

<u>ಆನೇಕಲ್ ಯೋಜನಾ ಪ್ರಾಧಿಕಾರವು ಕರ್ತವ್ಯ ನಿರ್ವಹಿಸುವ ಕಾರ್ಯವಿಧಾನ</u>

ಯೋಜನಾ ಪ್ರಾಧಿಕಾರದ ಚಟುವಟಿಕೆಗಳನ್ನು ವಿವಿಧ ಕಾಯ್ದೆಗಳು ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಕಾಲಕಾಲಕ್ಕೆ ನೀಡಲಾಗುವ ನಿರ್ದೇಶನಗಳನ್ವಯ ನಡೆಸಲಾಗುತ್ತದೆ.

ಆನೇಕಲ್ ಯೋಜನಾ ಪ್ರಾಧಿಕಾರವು ಅನುಸರಿಸುತ್ತಿರುವ ಕಾಯ್ದೆ ಹಾಗೂ ನಿಯಮಗಳು

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961.
- ಯೋಜನಾ ಪ್ರಾಧಿಕಾರದ ನಿಯಮಗಳು 1965.

ಪ್ರಾಧಿಕಾರದಲ್ಲಿ ಲಭ್ಯವಿರುವ ಕಡತಗಳು / ಮಾಹಿತಿಗಳು

- ಸರ್ಕಾರದಿಂದ ಮಹಾಯೋಜನೆ ನಕ್ಷೆ ಹಾಗೂ ವಲಯ ನಿಯಮಾವಳಿಗಳು.
- ಅನುಮೋದಿತ ವಿನ್ಯಾಸ ನಕ್ಷೆಗಳು.
- ವ್ಯವಸಾಯ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಿದ ಕಡತಗಳು.
- ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡಿದ ಕಡತಗಳು.
- ಭೂ ಉಪಯೋಗ ಬದಲಾವಣೆ ಸಂಬಂಧದ ಕಡತಗಳು.
- ಆದಾಯ ಮತ್ತು ವೆಚ್ಚಗಳ ನಗದು ವಹಿ
- ದಾಸ್ತಾನು ಪುಸ್ತಕ.

ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವಿವರಗಳು

ಸದಸ್ಯ ಕಾರ್ಯದರ್ಶಿ	ಶ್ರೀ ಎನ್.ಎಂ.ನಂಜೇಗೌಡ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	ಶ್ರೀ ಕೆ.ಎನ್.ನಾಗರಾಜ
ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–1	ಶ್ರೀ ಜಗನ್ನಾಥ
ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–2	ಶ್ರೀಮತಿ ವಿದ್ಯಾ.ಡಿ
ನಗರ ಯೋಜಕರು–1	ಶ್ರೀಮತಿ ಓ.ಜಾನಕಿ
ನಗರ ಯೋಜಕರು–2	––

ಮಾಹಿತಿ ಹಕ್ಕು ಅಧಿನಿಯಮ, 2005 ರಡಿಯಲ್ಲಿ ಯೋಜನಾ ಪ್ರಾಧಿಕಾರದಲ್ಲಿ ನಿಯುಕ್ತಿಗೊಳಿಸಲ್ಪಟ್ಟ ಅಧಿಕಾರಿಗಳ ವಿವರಗಳು

ಸಾರ್ವಜನಿಕ ಮಾಹಿತಿ ಅಧಿಕಾರಿ	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು
ಮೇಲ್ಮನವಿ ಪ್ರಾಧಿಕಾರ	ಸದಸ್ಯ–ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು